ಶ್ರೀಮತಿ ದಮಯಂತಿ ಬೋರೇಗೌಡ.—ಇನ್ನು ಮುಂದೆ ಕನ್ನಡಿಗರನ್ನು ಅಲ್ಲಿಗೆ ಕಳುಹಿಸುವುದಕ್ಕೆ ಏರ್ಪಾಡುಮಾಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಅವರನ್ನು ಎಷ್ಟರಮಟ್ಟಿಗೆ ಕಳುಹಿಸುವುದಕ್ಕೆ ಸಾಧ್ಯವಿದೆ ಎಂಬುದನ್ನು ನೋಡಿ ನಾನು ಅದರ ಬಗ್ಗೆ ಪ್ರಯತ್ನಮಾಡಿ ಕಳುಹಿಸಿಕೊಡುತ್ತೇನೆ. ಸಾಧ್ಯವಿಲ್ಲದೆ ಹೋದರೆ ಅಲ್ಲಿಯೇ ತೆಗೆದುಕೊಳ್ಳುತ್ತಿದ್ದೇವೆ ಅವರನ್ನು ಅನೇಕ ಸಂದರ್ಭಗಳಲ್ಲಿ ಹೆಚ್ಚು ಜನ ಹೋದಾಗ ನೋಡುವುದಕ್ಕೆ ಅವಕಾಶ ಇರುವುದಿಲ್ಲ.

EXPENDITURE TO BE INCURRED TOWARDS EDUCATION IN THE STATE.

407. SRI K. SRIRAMULU (Gandhinagar).—

Will the Minister for Education be pleased to state.—

(*a*) the total amount of expenditure to be incurred by the Government towards education in the State ;

(*b*) out of this, the amount to be spent for Government and private schools ;

(*c*) the amount spent or granted for development of different languages under education Head ?

SRI A. R. BADARINARAYANA.—(Minister for Education)

An amount of Rs. 60.90 crores is earmarked for the year 1972-73 towards education.

(*b*)	*Non-plan.*		*Rs. in crores.*
1.	Government Primary Schools	...	24.07
2.	Private Primary School	...	2.61
3.	Local boards Primary Schools	...	0.88
4.	Government Secondary Schools	...	2.10
5.	Private Secondary Schools	...	7.17
6.	Local Boards Primary Schools	...	2.34
	Total	...	39.17
	Plan.		
1.	Primary Education	...	1.49
2.	Secondary Education	...	0.35
	Total	...	1.84

(*c*) The details of amount earmarked in respect of different languagges is not available, as the Budget is not framed on those lines.

ಶ್ರೀ ಕೆ. ಶ್ರೀರಾಮುಲು.—ತಮ್ಮ ಇಲಾಖೆಯಲ್ಲಿ ಯಾವ್ಯಾವ ಭಾಷೆಗೆ ಎಷ್ಟೆಷ್ಟು ವಿದ್ಯಾರ್ಥಿಗಳು ಇದ್ದಾರೆಂಬುದು ಗೊತ್ತಾಗುತ್ತದೆಯೇ ?

† ಶ್ರೀ ಎ. ಆರ್. ಬದರೀನಾರಾಯಣ.—ಬಡ್ಜೆಟ್ಟನ್ನು ಫ್ರೇಂ ಮಾಡಿರುವುದು ಭಾಷಾವಾರು ಆಧಾರದ ಮೇಲೆ ಅಲ್ಲವೆಂದು ಹೇಳಿದೆ.

ಶ್ರೀ ಕೆ. ಶ್ರೀರಾಮುಲು.—ನಾನು ಒಂದು ಆಧಾರದ ಮೇಲೆ ಪ್ರಶ್ನೆ ಕೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ ತಾವು ಉತ್ತರ ಕೊಟ್ಟಿರುವ ಪ್ರಕಾರ ಕನ್ನಡವನ್ನು ಯಾವ ಮಟ್ಟಕ್ಕೆ ಬೆಳಸಬೇಕೆಂದು ನಮ್ಮ ಇಲಾಖೆಯ ಅಧಿಕಾರಿಗಳಿಗೇ ಗೊತ್ತಿಲ್ಲವೆಂದು ಹೇಳಿದರೆ ಅದನ್ನು ಒಪ್ಪುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ್.—ಇದುವರೆಗೂ ಇರತಕ್ಕ ಪದ್ಧತಿ ಪ್ರಕಾರ ಭಾಷಾವಾರು ಆಧಾರದ ಮೇಲೆ ಬಡ್ಜೆಟ್ಟನ್ನು ಫ್ರೇಂ ಮಾಡಲಿಲ್ಲ. ತಾವು ಹೇಳಿದಮೇಲೆ ಈಗ ಆ ವಿಚಾರದ ಬಗ್ಗೆ ಗಮನಕೊಡಲಾಗುತ್ತದೆ.

ಶ್ರೀ ಕೆ. ಶ್ರೀರಾಮುಲು.—ಎಲ್ಲಾ ಶಾಲೆಗಳಲ್ಲಿಯೂ ಕನ್ನಡವನ್ನು ಕಡ್ಡಾಯವಾಗಿ ಮಾಡುವುದರ ಬಗ್ಗೆ ತಾವೇನಾದರೂ ಯೋಚನೆ ಮಾಡಿದ್ದೀರಾ? ಅದನ್ನು ಕಡ್ಡಾಯವಾಗಿ ಕಲಿಸಬೇಕೆಂಬುದು ನಿಮ್ಮ ನೀತಿಯಲ್ಲವೇ ?

ಶ್ರೀ ಎ. ಆರ್. ಬದರಿನಾರಾಯಣ್.—ಕನ್ನಡವನ್ನು ಕಡ್ಡಾಯವಾಗಿ ಮಾಡಬೇಕೆಂಬುದೇ ಸರ್ಕಾರದ ನೀತಿ.

RUNNING OF PRIMARY, SECONDARY SCHOOLS OF HASSAN TOWN IN RENTAL BUILDINGS

773. Sri K. H. Hanume Gowda (Hassan).—

Will the Minister for Education be pleased to state.—

(*a*) the number of Primary and Secondary Schools of Hassan Town which are being run in rental buildings ;

(*b*) whether there is a Scheme before Government to provide buildings to these Schools ;

(*c*) if so, the period within which all schools will be provided with buildings ?

Sri A. R. Badarinarayana.—Minister for Education

(*a*) 8 (Eight).

(*b*) The Government have issued an Order recently about school buildings in towns and cities. According to this order, if the Local Bodies construct buildings for the schools, the Government will take them on rental basis.

Besides, if the Local Bodies or Phylonthrophists donate the site and money required for school buildings, the Government will take up the construction work.

(*c*) if the abovementioned help is provided, the work will be taken up as early as possible.

ಶ್ರೀ ಕೆ. ಎಚ್. ಹನುಮೇಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಿಸಬೇಕಾದರೆ, ಸ್ಥಳದ ಜನರೂ, ಪಂಚಾಯತಿಯವರೂ ಮತ್ತು ತಾಲ್ಲೂಕು ಬೋರ್ಡಿನವರೂ ಸಹ ಎಷ್ಟೆಷ್ಟು ಹಣವನ್ನು ಕೊಡಬೇಕೆಂದು ಸರ್ಕಾರದ ಆದೇಶವಿದೆ ? ಅದೇ ರೀತಿಯಲ್ಲಿ ಟೌನುಗಳಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಬೇಕಾದರೆ ಎಷ್ಟೆಷ್ಟು ಹಣವನ್ನು ಕೊಡಬೇಕೆಂದು ಕಡ್ಡಾಯವಿದೆ ? ಹಾಗಿದ್ದರೆ ಎಷ್ಟು ಕೊಡಬೇಕಾಗುತ್ತದೆ ?